ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 01.07.2026
ಮುಂದುವರೆದು ಪಾಟೀಸವಾಲು **3** ರಿಂದ **7** ನೇ ಪ್ರತಿವಾದಿ ಪರ ಶ್ರೀ ಎಂ ಎಂ ಎಂ ವಕೀಲರಿಂದಃ

ಬಾಲವ್ವ ಮತ್ತು ಕನಕನಗೌಡರಿಗೆ ಗಂಡು ಸಂತಾನ ಇಲ್ಲದೆ ಇದುದ್ದರಿಂದ ಬಾಲವ್ವಳು ತನ್ನ ಮೊಮ್ಮಗಳಾದ ಮಾಸವ್ವಳನ್ನು ಭೀಮನಗೌಡ ತಂದೆ ತಿಪ್ಪಣ್ಣ ಗೋರೆಬಾಳರವರಿಗೆ ವಿವಾಹ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಬಾಲವ್ವಳು ಭೀಮನಗೌಡರಿಗೆ ವಿವಾಹ ನಂತರ ತನಗೆ ಗಂಡು ಸಂತಾನ ಇಲ್ಲದೆ ಇರುವುದರಿಂದ ಕಬ್ಬರಗಿಯ ತನ್ನ ಮನೆಯಲ್ಲಿಯೇ ವಾಸ ಇರಬೇಕು ಎಂದು ಷರತ್ತು ವಿಧಿಸಿ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ಭೀಮನಗೌಡರು ವಿವಾಹದ ನಂತರ ಕಬ್ಬರಗಿಯಲ್ಲಿ ಬಂದು ಶಾಶ್ವತವಾಗಿ ವಾಸ ಇದ್ದರು ಎಂದರೆ ಸರಿಯಲ್ಲ. ಆಕಾರಣದಿಂದ ಭೀಮನಗೌಡರು ಬಾಳವ್ವಳ ಮಗನಂತೆ ಕರ್ತವ್ಯ ನಿರ್ವಹಿಸಿದ್ದರು ಎಂದರೆ ಸರಿಯಲ್ಲ. ಅದೇ ಕಾರಣದಿಂದ ಭೀಮನಗೌಡರು ಕಬ್ಬರಗಿಯ ದಳಪತಿಯಾಗಿ ಕಾರ್ಯನಿರ್ವಹಿಸಿದ್ದರು ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ಮಾಸವ್ವಳ ಗಂಡನ ಹೆಸರನ್ನು ಕನಕನಗೌಡ ಎಂದು ಹೇಳಿರುತ್ತೇನೆ. ಬಾಲವ್ವಳ ಮೊಮ್ಮಗಳು ಮಾಸವ್ವಳ ಗಂಡನ ಹೆಸರು ಭೀಮನಗೌಡ ಗೋರೆಬಾಳ ಎಂದರೆ ಸರಿಯಲ್ಲ. ಈ ರೀತಿ ನಾನು ಪ್ರತಿವಾದ ಪತ್ರದಲ್ಲಿ ಮಾಹಿತಿ ನೀಡಿರುವುದಿಲ್ಲ. ಭೀಮನಗೌಡ ಗೋರೆಬಾಳ ರವರು ತನ್ನ ಮೊಮ್ಮಗಳಾದ ಮಾಸವ್ವಳನ್ನು ಮದುವೆಯಾದ ಕಾರಣಕ್ಕೆ ಬಾಲವ್ವಳು ತನ್ನ ಸಂಪೂರ್ಣ ಆಸ್ತಿಗಳನ್ನು ಮಾಸವ್ವಳ ಮಗನಾದ ಕನಕನಗೌಡರಿಗೆ ಬಿಟ್ಟು ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ.

ದಿನಾಂಕ 26.02.1959 ರ ಬಾಲವ್ವಳು ನೀಡಿದ ಅರ್ಜಿಯಂತೆ ದಾವಾ ಸ್ವತ್ತು 1 ರಿಂದ 3 ಮತ್ತು 5 , 6 ಗಳ ಖಾತೆಯನ್ನು ಕನಕನಗೌಡರ ಹೆಸರಿಗೆ ಖಾತೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 4 ನೇ ದಾವಾ ಸ್ವತ್ತನ್ನು ಅರ್ಜಿಯಲ್ಲಿ ನಮೂದಿಸಿದ್ದರು ಕೂಡಾ ನಜರ ಚೂಕಿನಿಂದ ಕನಕನಗೌಡರ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನಿನ ಖಾತೆಯು ಜಾಲವ್ವಳ ಹೆಸರಿನಲ್ಲಿತ್ತು ಎಂದು ನುಡಿದಿರುತ್ತಾರೆ. ಬಾಲವ್ವಳು ಅವಿದ್ಯಾವಂತಳು ಆಗಿದ್ದರಿಂದ ಖಾತೆ ಬದಲಾವಣೆ ಆಗಿರುವ ವಿಚಾರ ಅವಳಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನಂತರ ಜಾಲವ್ವಳು ಕಂದಾಯ ಅಧಿಕಾರಗಳೊಂದಿಗೆ ಸೇರಿ 4 ನೇ ದಾವಾ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಗಳ ಬಗ್ಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿಯು ನಾನು ಅವಿದ್ಯಾವಂತನಾಗಿರುವುದರಿಂದ ಅಷ್ಟು ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

ಆರ್ ಆರ್ ಟಿ 39/1990-1991 ದಿನಾಂಕ 31.12.1991 ರ ಆದೇಶದ ಬಗ್ಗೆ ಮತ್ತು ಯಾರ ನಡುವೆ ಆಯಿತು ಎಂದು ನನಗೆ ಗೊತ್ತಿಲ್ಲ. ಓಎಸ ನಂ. 354/2016 ರ ಪ್ರಕರಣವನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಓ ಎಸ ನಂ. 332/2016 ರ ಪ್ರಕರಣವನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಆರ್ ಆರ್ ಟಿ 53/2016-2017 ರ ಪ್ರಕರಣವನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ.

ಓ ಎಸ ನಂ. 557/2019 ರ ಪ್ರಕರಣವನ್ನು ನಾನು ಮಾಸನಗೌಡ, ಕನಕನಗೌಡ , ರಾಮನಗೌಡ ರವರ ವಿರುದ್ದ ಸಲ್ಲಿಸಿದ್ದೇನು. ಸದರಿ ಪ್ರಕರಣವನ್ನು ಜಮೀನಿನ ಕುರಿತು ಸಲ್ಲಿಸಿದ್ದೆನು. ಅದರ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಅವಿದ್ಯಾವಂತನಾಗಿದ್ದರಿಂದ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣ ಏನು ತೀರ್ಮಾನವಾಯಿತು ಎಂದು ನನಗೆ ಗೊತ್ತಿಲ್ಲ. ಆರ್ ಎ ನಂ. 31/2024 ರ ಅಫೀಲನ್ನು ನಾನು ಸಲ್ಲಿಸಿರತ್ತೇನೆ. ಸದರಿ ಅಫೀಲನ್ನು ಕನಕನಗೌಡ , ರಾಮನಗೌಡರವರ ವಿರುದ್ದ ಸಲ್ಲಿಸಿದ್ದೇನು. ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗ ಮತ್ತು ಅವುಗಳನ್ನು ಯಾವ ಉದ್ದೇಶಕ್ಕೆ ಸಲ್ಲಿಸಿದ್ದೆನೆ ಎಂದು ನನಗೆ ಮಾಹಿತಿ ಇರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗ ನಾನು ಅವಿದ್ಯಾವಂತನಾಗಿದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ರಿಂದ 6 ನೇ ದಾವಾ ಸ್ವತ್ತುಗಳಿಗೆ ಬಾಲವ್ವ ಗಂಡ ಕನಕನಗೌಡ ಪೋಲಿಸಪಾಟೀಲರವರು ಮೂಲ ಮಾಲೀಕರು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಬಾಲವ್ವಳ ಸ್ತ್ರೀಧನದ ಆಸ್ತಿಗಳು ಎಂದರೆ ಸರಿಯಲ್ಲ. ಆ ಕಾರಣದಿಂದ ಬಾಲವ್ವಳು ತನ್ನ ಆಸ್ತಿಗಳನ್ನು ಮರಿಮೊಮ್ಮಗನಾದ ಕನಕನಗೌಡರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಕನಕನಗೌಡರೆ ಬೇರೆ ಈ ಕನಕನಗೌಡರೆ ಬೇರೆ ಎಂದು ನುಡಿದಿರುತ್ತಾರೆ. ಬಾಲವ್ವಳ ಮರಿಮೊಮ್ಮಗ ಕನಕನಗೌಡ ತಂದೆ ಭೀಮನಗೌಡರಿಗೆ ಆಸ್ತಿಗಳನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 7 ರವರ ಮೇಲಿನ ರಾಜಕೀಯ ವೈಷಮ್ಯದಿಂದ ಅವರ ಆಸ್ತಿಗಳ ಕುರಿತು ನಾನು ಮತ್ತು ನಮ್ಮ ಕುಟುಂಬದವರು ಸೇರಿ ಮೋಸದಿಂದ ರಾಜಿ ಡಿಕ್ರಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣದಿಂದ ವಾದಿ ಮತ್ತು 3 ರಿಂದ 7 ನೇ ಪ್ರತಿವಾದಿಯ ತಾಯಿ

ಶಂಕ್ರವ್ವಳು ಈ ದಾವೆಯನ್ನು ನನ್ನ ಮತ್ತು ಜಾಲವ್ವಳ ವಿರುದ್ದ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಜಾಲವ್ವಳು 4 ನೇ ದಾವಾ ಸ್ವತ್ತಿನ ಕುರಿತು ತನ್ನ ಮೊಮ್ಮಗನಾದ ಮಾಸಪ್ಪನಿಗೆ ನಿಡಿ-117 ರಂತೆ ಮೃತ್ಯು ಪತ್ರ ಮಾಡಿಕೊಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಜಾಲವ್ವಳು ಸಾಯುವ ಒಂದು ವರ್ಷ ಮೊದಲಿನಿಂದ ಅನಾರೋಗ್ಯಕಿಡಾಗಿ ಕಣ್ಣು ಕಾಣುತ್ತಿರಲಿಲ್ಲ, ಕಿವಿ ಕೇಳುತ್ತಿರಲಿಲ್ಲ ಹಾಗೂ ಏನು ದಾಖಲಾತಿ ಮಾಡಿಕೊಡುತ್ತಿದ್ದೆನೆ ಎಂದು ತಿಳಿಯುತ್ತಿರಲಿಲ್ಲಎಂದರೆ ಸರಿಯಲ್ಲ. ಅದನ್ನು ದುರುಪಯೋಗಪಡಿಸಿಕೊಂಡು ನನ್ನ ಮಗ ಮಾಸಪ್ಪ ಸುಳ್ಳು ಮೃತ್ಯು ಪತ್ರ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸೃಷ್ಟಿ ಮಾಡಿದ ಮೃತ್ಯು ಪತ್ರಕ್ಕೆ ಪೂರಕವಾಗಿ ಸುಳ್ಳು ವಂಶವೃಕ್ಷವನ್ನು ನಮ್ಮ ಪ್ರತಿವಾದ ಪತ್ರದಲ್ಲಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರಕ್ಕೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನನ್ನ ಮಗ ಮಾಹಿತಿ ನೀಡಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಮಾಹಿತಿ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ.

ನಿಡಿ-103 ರ ಪ್ರಕರಣದಲ್ಲಿ 3 ರಿಂದ 7 ನೇ ಪ್ರತಿವಾದಿಯವರು ಪಕ್ಷಗಾರರು ಅಲ್ಲದೆ ಇರುವುದರಿಂದ ಸದರಿ ಡಿಕ್ರಿ ಅವರಿಗೆ ಬಂಧನಕಾರಿ ಅಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಕುರಿತು ಯಾವುದೆ ಮಾಹಿತಿ ಇಲ್ಲದೆ ಇದ್ದರು ನನ್ನ ಹೆಂಡತಿ ಮತ್ತು ಮಗನ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೇ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ರಿಂದ 6 ರಲ್ಲಿ ನನಗೆ ಯಾವುದೆ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ವಾದಿ ಪರ ವಕೀಲರು ಸಮಯವಕಾಶ ಕೋರಿದ್ದು , ಅನುಮತಿಸಿ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**